# ಕೊರೊನಾ ತಮ್ಮ ‘ಓಮೈಕ್ರಾನ್’ ಗುಮ್ಮ!

3

ಕೋವಿಡ್ ಕಾರಣದಿಂದ 2021ರಲ್ಲೂ ದೇಶ ಆರೋಗ್ಯ ತುರ್ತು ಪರಿಸ್ಥಿತಿಯನ್ನು ಎದುರಿಸಿತು. ಅದರಲ್ಲೂ ವರ್ಷದ ಮೊದಲ ಅರ್ಧದಲ್ಲಿ ಸಾಂಕ್ರಾಮಿಕದಿಂದ ಎಷ್ಟೊಂದು ಸಾವು–ನೋವುಗಳು, ಏನೆಲ್ಲ ಅವಘಡಗಳು. ಸೋಂಕಿತರ ಪ್ರಮಾಣ ಒಂದೇ ಸಮನೆ ಏರಿಕೆ ಆಗುತ್ತಾ ಹೋಗಿದ್ದರಿಂದ ಅವರಿಗೆ ಚಿಕಿತ್ಸೆ ಒದಗಿಸಲಾಗದೆ ಆರೋಗ್ಯ ಮೂಲಸೌಕರ್ಯ ಕುಯ್ಯೊ ಮರ್‍ರೊ ಎಂದು ಒದ್ದಾಡಿತು. ಆಮ್ಲಜನಕ ಸಿಲಿಂಡರ್‌ಗಳು, ಚಿಕಿತ್ಸಾ ಸೌಲಭ್ಯಗಳು ಹಾಗೂ ಔಷಧಿಗಳ ಕೊರತೆಯಿಂದ ಆಸ್ಪತ್ರೆಗಳ ಹಾಸಿಗೆಗಳಲ್ಲಿ ಜೀವಗಳು ತರಗೆಲೆಗಳಂತೆ ಉರುಳಿದವು. ಗ್ರಾಮಾಂತರ ಭಾಗದಲ್ಲೂ ಸೋಂಕು ವ್ಯಾಪಕವಾಗಿ ಹರಡಿತು. ಅಲ್ಲಿನ ಅರ್ಥವ್ಯವಸ್ಥೆಯು ಆಸ್ಪತ್ರೆಯಲ್ಲೇ ಕಾಲುಚಾಚಿ ಮಲಗಿಬಿಟ್ಟಿತು. ಕೋವಿಡ್‌ಗೆ ಒಳಗಾದವರ ಚಿಕಿತ್ಸೆಗಾಗಿ ಅವರ ಕುಟುಂಬಗಳು ಜೀವಮಾನದ ಗಳಿಕೆಯನ್ನೆಲ್ಲ ವ್ಯಯಿಸುವಂತಾಯಿತು. ಆಸ್ಪತ್ರೆಗಳ ಮುಂದೆ ರೋಗಿಗಳು, ಅವರ ಸಂಬಂಧಿಕರು ಮತ್ತೆ ಸಾಲುಗಟ್ಟಿ ನಿಲ್ಲುವಂತಾಯಿತು. ಸ್ಮಶಾನಗಳಲ್ಲಿ ಹೆಣ ಸುಡಲು ಸರತಿಯಲ್ಲಿ ನಿಂತ ದೃಶ್ಯಗಳು ಮನಕಲಕುವಂತಿದ್ದವು. ಕೋವಿಡ್‌ನ ಈ ಎರಡನೇ ಅಲೆಯು ದೇಶವನ್ನೇ ತತ್ತರಿಸುವಂತೆ ಮಾಡಿತು.

ಯಾರದ್ದೋ ಗೊತ್ತಿಲ್ಲದ, ವಾರಸುದಾರರೂ ಇಲ್ಲದ ನೂರಾರು ಹೆಣಗಳು ‘ಪವಿತ್ರ’ ಗಂಗಾನದಿಯಲ್ಲಿ ತೇಲಿ ಬಂದು ಕೋವಿಡ್‌ನ ಎರಡನೇ ಅಲೆಯ ಘೋರ ಮುಖವನ್ನು ಅನಾವರಣಗೊಳಿಸಿದವು. ಉತ್ತರ ಪ್ರದೇಶದಲ್ಲಿ ಪ್ರತಿದಿನವೂ 200–300 ಜನರು ಕೋವಿಡ್‌ನಿಂದ ಸಾಯುತ್ತಿದ್ದಾರೆ ಎಂಬುದು ಅಧಿಕೃತವಾಗಿ ದಾಖಲಾಗುತ್ತಿದ್ದ ಲೆಕ್ಕ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಸಾವಿನ ಸಂಖ್ಯೆ ದಿಗಿಲು ಹುಟ್ಟಿಸುವಷ್ಟು ಹೆಚ್ಚಾಗಿತ್ತು. ನದಿಯಲ್ಲಿ ತೇಲಿ ಬಂದ ಹೆಣಗಳು, ಕೋವಿಡ್‌ನಿಂದಾದ ವಾಸ್ತವಿಕ ಸಾವಿನ ಸಂಖ್ಯೆಗೂ ಸರ್ಕಾರದ ಲೆಕ್ಕಕ್ಕೂ ಅಜಗಜಾಂತರವಿದೆ ಎಂದು ಸಾಕ್ಷ್ಯ ನುಡಿಯುತ್ತಿದ್ದವು. ಗುಜರಾತ್‌ನಲ್ಲಿ ಸ್ವಯಂಸೇವಾ ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯಿಂದಲೂ ಸಾವಿನ ಸಂಖ್ಯೆಯಲ್ಲಿ ಅಂತಹ ವ್ಯತ್ಯಾಸ ಇರುವುದು ನಿಜ ಎನ್ನುವುದೂ ಸಾಬೀತಾಯಿತು.

ಸಾಂಕ್ರಾಮಿಕ ಮತ್ತೆ ವ್ಯಾಪಕವಾಗಿ ಹರಡದಂತೆ ತಡೆಗಟ್ಟಲು ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಏಪ್ರಿಲ್, ಮೇ, ಜೂನ್ ಅವಧಿಯಲ್ಲಿ ಮತ್ತೆ ದೀರ್ಘ ಲಾಕ್‌ಡೌನ್ ಘೋಷಣೆಯಾಯಿತು. ಸೋಂಕಿನ ತೀವ್ರತೆ ಕಡಿಮೆಯಾಗಿ ಅನ್‌ಲಾಕ್ ಆಗುತ್ತಿದ್ದಂತೆ, ಅದುವರೆಗೆ ಅನುಭವಿಸಿದ ಸಂಕಷ್ಟವನ್ನೆಲ್ಲ ಅರೆಕ್ಷಣದಲ್ಲಿ ಮರೆತ ಜನ ಪುತಪುತನೇ ರಸ್ತೆಗೆ ಬಿದ್ದರು. ಕೋವಿಡ್ ಸಾಂಕ್ರಾಮಿಕವು ತಂದೊಡ್ಡುವ ಅಪಾಯದ ಕುರಿತು ಸಂಪೂರ್ಣವಾಗಿ ಉದಾಸೀನದ ಧೋರಣೆ ತಾಳಿದರು.

ನಮ್ಮ ರಾಜಕೀಯ ಮತ್ತು ಧಾರ್ಮಿಕ ಮುಖಂಡರು ಇದ್ಯಾವುದನ್ನೂ ತಲೆಗೆ ಹಾಕಿಕೊಳ್ಳದೆ ಪ್ರಚಾರ, ಧಾರ್ಮಿಕ ಸಭೆಗಳಲ್ಲಿ ನಿರುಮ್ಮಳವಾಗಿ ಪಾಲ್ಗೊಂಡರು. ಕೋವಿಡ್ ಕಾಲದಲ್ಲೂ ಪ್ರಧಾನಿ, ಕೇಂದ್ರ ಸಚಿವರು, ಪ್ರತಿಪಕ್ಷಗಳ ನಾಯಕರು ಚುನಾವಣಾ ರ‍್ಯಾಲಿ ನಡೆಸಿದರು. ಅಪಾಯ ಲೆಕ್ಕಿಸದೆ, ವಿರೋಧವನ್ನೂ ಗಣನೆಗೆ ತೆಗೆದುಕೊಳ್ಳದೆ ಕುಂಭಮೇಳದ ಆಯೋಜನೆಗೆ ಸರ್ಕಾರ ಅನುವು ಮಾಡಿಕೊಟ್ಟಿತು.

‘ಏಪ್ರಿಲ್–ಮೇನಲ್ಲಿ ನಾವು ಕಳೆದುಕೊಂಡ ರೋಗಿಗಳ ಸಂಖ್ಯೆಯು ಇಡೀ ವರ್ಷದ ಕಾಲ ನಾವು ಕಳೆದುಕೊಳ್ಳುವ ರೋಗಿಗಳ ಸಂಖ್ಯೆಯ ದುಪ್ಪಟ್ಟಿಗೂ ಮಿಗಿಲಾಗಿತ್ತು. ನಾವು ಚಿಕಿತ್ಸೆ ನೀಡಲಾಗದೇ ಹಿಂದೆ ಕಳಿಸಿದ ರೋಗಿಗಳ ಸಂಖ್ಯೆಯು ನಾವು ಚಿಕಿತ್ಸೆ ನೀಡಿದವರ ಸಂಖ್ಯೆಗಿಂತಲೂ ಹೆಚ್ಚಿತ್ತು. ಚಿಕಿತ್ಸೆ ನೀಡಲು ಕಡಿಮೆ ಸಮಯವಿತ್ತು, ದುಃಖಿಸಲು ಇದ್ದ ಸಮಯ ಅದಕ್ಕಿಂತಲೂ ಕಡಿಮೆಯದಾಗಿತ್ತು ಹಾಗೂ ಇವೆಲ್ಲವನ್ನೂ ಅರ್ಥೈಸಿಕೊಳ್ಳಲು, ಒಳಗಿಳಿಸಿಕೊಳ್ಳಲು ಅಕ್ಷರಶಃ ಸಮಯವೇ ಇರಲಿಲ್ಲ’ ಎಂದು ಛತ್ತೀಸ್‌ಗಡದ ವೈದ್ಯರೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದು ದೇಶದ ಒಟ್ಟು ಪರಿಸ್ಥಿತಿಯ ಕಥೆ ಹೇಳುತ್ತಿತ್ತು.

ಈ ಮಧ್ಯೆ, ಜಾಗತಿಕ ಮಟ್ಟದಲ್ಲಿ ಅಮೆರಿಕ ಹಾಗೂ ಯುರೋಪ್ ಸಾಂಕ್ರಾಮಿಕದ ಹೊಡೆತದಿಂದ ಮತ್ತೆ ನಲುಗಿದವು. ದಕ್ಷಿಣ ಆಫ್ರಿಕಾ, ಬೋಟ್ಸ್‌ವಾನ, ಹಾಂಗ್‌ಕಾಂಗ್ ದೇಶಗಳಲ್ಲಿ ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ‘ಓಮೈಕ್ರಾನ್’ ಪತ್ತೆಯಾಯಿತು. ದೇಶದಲ್ಲಿ ‘ಓಮೈಕ್ರಾನ್’ನಿಂದ ಸೋಂಕಿಗೀಡಾದ ಮೊದಲ ಪ್ರಕರಣ ಬೆಂಗಳೂರಿನಲ್ಲಿ ವರದಿಯಾಯಿತು. ಎಚ್ಚರಿಕೆ ಮರೆತು ನಿರಾಳರಾಗಿದ್ದ ಜನರಲ್ಲಿ ವರ್ಷಾಂತ್ಯದ ವೇಳೆಗೆ ಆತಂಕ ಹೆಚ್ಚಿ, ಹಲವು ನಿರ್ಬಂಧಗಳು ಮರುಜಾರಿಯಾದವು. ಅರ್ಥವ್ಯವಸ್ಥೆ ಚೇತರಿಸಿಕೊಳ್ಳುವ ಹೊತ್ತಿನಲ್ಲಿಯೇ ಪತ್ತೆಯಾದ ಹೊಸ ವೈರಾಣು ಕಳವಳಕ್ಕೆ ಕಾರಣವಾಯಿತು. ‘ಓಮೈಕ್ರಾನ್’ನ ದೊಡ್ಡ ಅಲೆಯು ತಂದೊಡ್ಡಬಹುದಾದ ಅಪಾಯದ ಹೊಸ್ತಿಲಲ್ಲಿ ದೇಶವನ್ನು ನಿಲ್ಲಿಸಿದ 2021, ತಾನು ಮಾತ್ರ ನಿರುದ್ವಿಗ್ನವಾಗಿ ತೆರೆಮರೆಗೆ ಸರಿಯುವತ್ತ ಹೆಜ್ಜೆ ಹಾಕಿತು.



ಕೇವಲ ಕ್ರೀಡಾಕೂಟವಾಗಿರಲಿಲ್ಲ. ಪದಕ ಗೆದ್ದ ಕ್ರೀಡಾಪಟುಗಳ ಸಂಭ್ರಮವಷ್ಟೇ ಆಗಿರಲಿಲ್ಲ. ಕೋವಿಡ್‌ನಿಂದ ನೊಂದಿದ್ದ ಜೀವಗಳಿಗೆ ಸಂಜೀವಿನಿಯಾಗಿತ್ತು. ಸೋಂಕಿನ ವ್ಯಾಪಕ ಹರಡುವಿಕೆ, ಸಾವಿನಿಂದ ಉಂಟಾಗಿದ್ದ ಆತಂಕದಿಂದಾದ ನೋವಿಗೆ ‘ಒಲಿಂಪಿಕ್ಸ್ ಜ್ಯೋತಿ’ ಚೈತನ್ಯದ ಬೆಳಕು ನೀಡಿತು.

ಸೋಂಕಿನ ಕಾರಣದಿಂದಾಗಿ ವರ್ಷಾನುಗಟ್ಟಲೆ ಜನ ಮನೆಬಿಟ್ಟು ಹೊರಗೆ ಬಂದಿರಲಿಲ್ಲ. ಸಂಘಜೀವಿಯಾದ ಮನುಷ್ಯ ಪರಸ್ಪರ ಹತ್ತಿರವೂ ಸುಳಿದಿರಲಿಲ್ಲ. ಈ ಎಲ್ಲಾ ಆತಂಕಕ್ಕೆ ಒಲಿಂಪಿಕ್ಸ್ ನವಚೈತನ್ಯ ಒದಗಿಸಿತು. 205 ದೇಶಗಳ 11 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು, ಸಿಬ್ಬಂದಿ, ಒಂದು ಸಾವಿರಕ್ಕೂ ಹೆಚ್ಚು ಪತ್ರಕರ್ತರು, 17 ದಿನ ವಿಶ್ವಕ್ಕೆ ಕ್ರೀಡಾಮೌಲ್ಯದ ಸಾಮರ್ಥ್ಯ ತೋರಿಸಿಕೊಟ್ಟರು.

ಪದಕ ಗಳಿಕೆಯಲ್ಲಿ ಮುಂಚೂಣಿಯಲ್ಲಿರುವ ಅಮೆರಿಕ ಒಟ್ಟು 113 ಪದಕಗಳೊಂದಿಗೆ ಅಗ್ರಸ್ಥಾನ ಉಳಿಸಿಕೊಂಡರೆ, ಚೀನಾ (88) ಮತ್ತು ಜಪಾನ್ (58) ನಂತರದ ಎರಡು ಸ್ಥಾನಗಳನ್ನು ಪಡೆದುಕೊಂಡವು. 2016ರ ಒಲಿಂಪಿಕ್ಸ್‌ನಲ್ಲಿ ಮೂರನೇ ಸ್ಥಾನದಲ್ಲಿದ್ದ ಚೀನಾ ಒಟ್ಟು ಪದಕ ಗಳಿಕೆಯಲ್ಲಿ ಎರಡನೇ ಸ್ಥಾನಕ್ಕೆ ಜಿಗಿಯಿತು. ಎರಡನೇ ಸ್ಥಾನದಲ್ಲಿದ್ದ ಗ್ರೇಟ್ ಬ್ರಿಟನ್ ಈ ಬಾರಿ ನಾಲ್ಕನೇ ಸ್ಥಾನಕ್ಕೆ ಕುಸಿಯಿತು. ಭಾರತ ಮೊದಲ ಬಾರಿಗೆ ಏಳು ಪದಕಗಳ ಮಾಲೆ ಧರಿಸಿತು.

ಬಂಗಾರದ ಪದಕಕ್ಕಾಗಿ ಹಾತೊರೆಯುತ್ತಿದ್ದ ಭಾರತದ ಕ್ರೀಡಾಪ್ರೇಮಿಗಳ ಕನಸನ್ನು ನೀರಜ್ ಚೋಪ್ರಾ (ಜಾವೆಲಿನ್ ಎಸೆತ) ನನಸು ಮಾಡಿದರು. ಮೀರಾಬಾಯಿ ಚಾನು (ವೇಟ್ ಲಿಫ್ಟಿಂಗ್) ಬೆಳ್ಳಿ, ರವಿಕುಮಾರ ದಹಿಯಾ (ಕುಸ್ತಿ) ಬೆಳ್ಳಿ, ಪಿ.ವಿ. ಸಿಂಧು (ಬ್ಯಾಡ್ಮಿಂಟನ್) ಕಂಚು, ಲವ್ಲಿನಾ ಬೋರ್ಗೊಹೈನ್ (ಬಾಕ್ಸಿಂಗ್) ಕಂಚು ಮತ್ತು ಬಜರಂಗ್ ಪೂನಿಯಾ (ಕುಸ್ತಿ) ಕಂಚು ಗೆದ್ದುಕೊಂಡರು. ಭಾರತ ಪುರುಷರ ಹಾಕಿ ತಂಡ ನಾಲ್ಕು ದಶಕಗಳ ಬಳಿಕ ಕಂಚು ಗೆದ್ದು, ರಾಷ್ಟ್ರೀಯ ಕ್ರೀಡೆಯ ಸಾಧಕರಿಗೆ ಹೊಸ ಹುಮ್ಮಸ್ಸು ತಂದುಕೊಟ್ಟಿತು.

ಒಲಿಂಪಿಕ್ಸ್‌ನ ಸಮಾರೋಪದ ದಿನ ಎಲ್ಲ ರಾಷ್ಟ್ರಗಳ ಕ್ರೀಡಾಪಟುಗಳು ವೃತ್ತಾಕಾರದಲ್ಲಿ ನಿಂತು ತಮ್ಮ ದೇಶಗಳ ಧ್ವಜಗಳನ್ನು ಪ್ರದರ್ಶಿಸಿ ತೋರಿದ ಒಗ್ಗಟ್ಟಿನ ಸುಂದರ ಚಿತ್ರ ಸದಾಕಾಲ ನೆನಪಿನಲ್ಲಿ ಉಳಿಯುವಂತಹದ್ದು. ಆ ಚಿತ್ರ ನೀಡಿದ ಸಂದೇಶ ಹಾಗೂ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಅಧ್ಯಕ್ಷ ಥಾಮಸ್ ಬಾಕ್ ಹೇಳಿದ ‘ಈ ಒಲಿಂಪಿಕ್ಸ್ ಜಗತ್ತಿಗೆ ಹೊಸ ಭರವಸೆ ನೀಡಿದೆ’ ಎನ್ನುವ ಮಾತು ಪ್ರತಿ ಕ್ರೀಡಾಕೂಟದ ಸಮಯದಲ್ಲಿ ನೆನಪಾಗುತ್ತಲೇ ಇರುತ್ತದೆ.